ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ, ೨೫, ಮೇ, ೨೦೨೬ (ಜ್ಯೇಷ್ಠ, ೦೪, ಶಕವರ್ಷ, ೧೯೪೮) BENGALURU, MONDAY, 25, MAY, 2026 (JYAISTHA , 04, SHAKAVARSHA, 1948)	ಸಂ. ೩೮೯ No. 389

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 411 ಎಲ್ ಡಬ್ಲ್ಯೂಎ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:22.05.2026

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಈವರೆಗೂ 81 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠವೇತನ ಕಾಯ್ದೆ 1948ರ ಕಲಂ 5(1)(ಎ) ಹಾಗೂ 5(1) (ಬಿ)ರಡಿ ಪ್ರತ್ಯೇಕವಾದ ವೇತನ ದರಗಳನ್ನು ನಿಗದಿಪಡಿಸಿ/ಪರಿಷ್ಕರಿಸಿ ಅಧಿಸೂಚನೆಯನ್ನು ಹೊರಡಿಸಲಾಗುತ್ತಿತ್ತು. 2022-23ನೇ ಸಾಲಿನಲ್ಲಿ ಒಟ್ಟು 34 ವಿವಿಧ ಅನುಸೂಚಿತ ಉದ್ದಿಮೆಗಳಿಗೆ ಸದರಿ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ಶೇ. 5 ರಿಂದ 10 ರಷ್ಟು ಏರಿಕೆ ಮಾಡಿದ ದರಗಳನ್ನು ಪರಿಷ್ಕರಿಸಿ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಕಾರ್ಮಿಕ ಸಂಘದವರು ಸದರಿ ಅಧಿಸೂಚನೆಗಳನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದಲ್ಲಿ ಪ್ರಶ್ನಿಸಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 13103/2023 ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 26.9.2023, 10.10.2023 ಮತ್ತು 12.10.2023 ರಂದು ನೀಡಿದ ತೀರ್ಪುಗಳಲ್ಲಿ ಸದರಿ ಅಧಿಸೂಚನೆಗಳನ್ನು ರದ್ದುಪಡಿಸಿ, ಮೆ|| ರೆಪ್ಪಕೋಸ್ ಬೆಟ್ ಅಂಡ್ ಕಂ., ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಮಾರ್ಗಸೂಚಿಗಳನ್ನನುಸರಿಸಿ ಕನಿಷ್ಠ ವೇತನ ಲೆಕ್ಕಾಚಾರ ಮಾಡಿ ಹೊಸದಾಗಿ ಅಧಿಸೂಚನೆಗಳನ್ನು ಹೊರಡಿಸುವಂತೆ ನಿರ್ದೇಶಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ತೀರ್ಪುಗಳನ್ನು ಪ್ರಶ್ನಿಸಿ, ವಿವಿಧ ಆಡಳಿತ ವರ್ಗದವರು ಮೇಲ್ಮನವಿ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ದಾಖಲಿಸಿದ್ದು, ಸದರಿ ಮೇಲ್ಮನವಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ: 13-12-2024 ರಂದು ಹೊರಡಿಸಿರುವ ತೀರ್ಪಿನಲ್ಲಿ ಏಕ ನ್ಯಾಯಾಧೀಶರ ಆದೇಶವನ್ನು ರದ್ದುಗೊಳಿಸಿ, ಮರ್ರು ವಿಚಾರಣೆಗೆ ಪ್ರಕರಣವನ್ನು ಏಕ ನ್ಯಾಯಾಧೀಶರಿಗೆ ಹಿಂತಿರುಗಿಸಲಾಯಿತು.

ಏಕ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಈ ಪ್ರಕರಣ ಬಾಕಿ ಇರುವಾಗ, ರಾಜ್ಯ ಸರ್ಕಾರವು 99 ಉದ್ಯೋಗಗಳಿಗೆ ಸಂಬಂಧಿಸಿದಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ 11.04.2025 ರಂದು ಹೊಸ ಕರಡು ಅಧಿಸೂಚನೆಯನ್ನು ಹೊರಡಿಸಿತು. ವಿವಿಧ ಅನುಸೂಚಿತ ಉದ್ದಿಮೆಗಳಲ್ಲಿ ವಲಯವಾರು ಹಾಗೂ ಕೌಶಲ್ಯವಾರು ವೇತನ ದರದಲ್ಲಿ ವ್ಯತ್ಯಾಸಗಳು ಕಂಡು ಬಂದ ಹಿನ್ನೆಲೆಯಲ್ಲಿ ಹಾಗೂ ಎಲ್ಲಾ ವರ್ಗದ ಕಾರ್ಮಿಕರಿಗೂ ಸಮಾನವಾದ ಕನಿಷ್ಠ ವೇತನ ದೊರೆಯಬೇಕೆಂಬ ಸದುದ್ದೇಶದಿಂದ, ಈ ಹಿಂದೆ ಅನುಸೂಚಿತ ಉದ್ದಿಮೆವಾರು ಪ್ರತ್ಯೇಕವಾಗಿ ಅಧಿಸೂಚನೆಗಳನ್ನು ಹೊರಡಿಸುತ್ತಿದ್ದ ಕ್ರಮದ ಬದಲಾಗಿ ದಿನಾಂಕ:11.04.2025ರಂದು ಕನಿಷ್ಠ ವೇತನ ಕಾಯ್ದೆ, 1948ರ (ಕೇಂದ್ರ ಕಾಯ್ದೆ: XI) ರ ಕಲಂ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಏಕರೂಪ ಕರಡು ಅಧಿಸೂಚನೆಯನ್ನು ಹೊರಡಿಸಿ ಸಲಹೆ / ಆಕ್ಷೇಪಣೆಗಳನ್ನು ಸಲ್ಲಿಸಲು 2 ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ, ದಿನಾಂಕ: 16.04.2025 ರ ಆದೇಶದ ಮೂಲಕ ಈ ಪ್ರಕರಣವನ್ನು ವಿಲೇವಾರಿ ಮಾಡಲಾಗಿ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ:

> "The petitioners, who have asserted certain cause, want the petitions to be dismissed in the light of the Draft Notification which is issued. The final Notification will have to be issued by the State Government after due process and if there is any cause with such final Notification being issued either in the petitioners or the respondents, they will have to be at liberty to work out their remedies**.** This, however, cannot be a reason to continue the petitions on the board of this Court or make any particular observation, and hence, the petitions are disposed of."

ಗೌರವಾನ್ವಿತ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಕ್ತ ಪ್ರಕ್ರಿಯೆಯ ನಂತರ ಅಂತಿಮ ಅಧಿಸೂಚನೆಯನ್ನು ಹೊರಡಿಸುವಂತೆ ನಿರ್ದೇಶನ ನೀಡಿದೆ. ಈ ಸೂಕ್ತ ಪ್ರಕ್ರಿಯೆಯಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸುವುದು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಇಡುವುದು ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಮೊದಲು ಅದರ ಶಿಫಾರಸುಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವುದು ಸೇರಿದೆ. ಹೈಕೋರ್ಟ್‌ನ ಏಕ ನ್ಯಾಯಾಧೀಶರ ಈ ತೀರ್ಪನ್ನು ಎಲ್ಲಾ ಪಕ್ಷಗಳು - ಕಾರ್ಮಿಕ ಸಂಘಗಳು, ರಾಜ್ಯ ಸರ್ಕಾರ ಮತ್ತು ಉದ್ಯೋಗದಾತರು - ಅಂಗೀಕರಿಸಿದ್ದಾರೆ. ಇದು ಅಂತಿಮ ರೂಪವನ್ನು ಪಡೆದುಕೊಂಡಿದೆ.

ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ನಿರ್ದೇಶನದನ್ವಯ ಮೆ|| ರೆಪ್ಪಕೋಸ್ ಬ್ರೆಟ್ ಅಂಡ್ ಕಂ., ಪ್ರಕರಣದ ಮಾನದಂಡಗಳನ್ವಯ ಕಾರ್ಮಿಕರ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ಯಾವುದೇ ರೀತಿಯ ಅಡೆತಡೆಗಳು ಈ ಹಂತದಲ್ಲಿ ಇಲ್ಲದೇ ಇರುವುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಉಲ್ಲೇಖಿಸಿದ ತೀರ್ಪಿನ ಬೆಳಕಿನ ಅಡಿಯಲ್ಲಿ ಕನಿಷ್ಠ ವೇತನವನ್ನು ಪರಿಷ್ಕರಿಸಲು ತೀರ್ಮಾನಿಸಿ ದಿನಾಂಕ: 11-04-2025 ರಂದು ಹೊರಡಿಸಲಾದ ಏಕ ರೂಪದ ಕರಡು ಅಧಿಸೂಚನೆ (Single Notification) ಗೆ ರಾಜ್ಯ ಸರ್ಕಾರವು ಉದ್ಯೋಗದಾತರು, ಕೈಗಾರಿಕಾ ಮುಖ್ಯಸ್ಥರು ಮತ್ತು ಕಾರ್ಮಿಕ ಸಂಘಗಳಿಂದ ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದೆ. ಸದರಿ ಆಕ್ಷೇಪಣೆ ಹಾಗೂ ಸಲಹೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ವೇತನ ಸಲಹಾ ಮಂಡಳಿಯ ಅಭಿಪ್ರಾಯ ಕೋರಲಾಗಿ, ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 29.07.2025 ಮತ್ತು 28.08.2025 ರಂದು ಚರ್ಚಿಸಿ ಸದರಿ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ ಮಧ್ಯೆ ಕೇಂದ್ರ ಸರ್ಕಾರವು ದಿನಾಂಕ: 21.11.2025 ರಿಂದ ವೇತನ ಸಂಹಿತೆ 2019 (Code on Wages, 2019) ಅನ್ನು ಜಾರಿಗೊಳಿಸಿರುತ್ತದೆ. ವೇತನ ಸಂಹಿತೆ 2019 ರ ಕಲಂ 69 ರ ಉದ್ಧೃತ ಭಾಗ ಈ ಕೆಳಕಂಡಂತಿದೆ.

> 69. (1) The Payment of Wages Act, 1936, the Minimum Wages Act, 1948, the Payment of Bonus Act, 1965 and the Equal Remuneration Act, 1976 are hereby repealed.
>
> (2) Notwithstanding such repeal, anything done or any action taken under the enactments so repealed including any notification, nomination, appointment, order or direction made thereunder or any amount of wages provided in any provision of such enactments for any purpose shall be deemed to have been done or taken or provided for such purpose under the corresponding provisions of this Code and shall be in force to the extent they are not contrary to the provisions of this Code till they are repealed under the corresponding provisions of this Code or by the notification to that effect by the Central Government.
>
> (3) Without prejudice to the provisions of sub-section (2), the provisions of section 6 of the General Clauses Act, 1897 shall apply to the repeal of such enactments.

ಮುಂದುವರೆಡು, General Clauses Act, 1897 ರ ಕಲಂ 6 ಈ ಕೆಳಕಂಡಂತಿದೆ:

"6. Effect of repeal.— Where this Act, or any Central Act or Regulation made after the commencement of this Act, repeals any enactment hitherto made or hereafter to be made, then, unless a different intention appears, the repeal shall not—

(a) revive anything not in force or existing at the time at which the repeal takes effect; or

(b) affect the previous operation of any enactment so repealed or anything duly done or suffered thereunder; or

(c) affect any right, privilege, obligation or liability acquired, accrued or incurred under any enactment so repealed; or

(d) affect any penalty, forfeiture or punishment incurred in respect of any offence committed against any enactment so repealed; or

(e) affect any investigation, legal proceeding or remedy in respect of any such right, privilege, obligation, liability, penalty, forfeiture or punishment as aforesaid; and any such investigation, legal proceeding or remedy may be instituted, continued or enforced, and any such penalty, forfeiture or punishment may be imposed as if the repealing Act or Regulation had not been passed".

ಈ ಕಾನೂನು ನಿಬಂಧನೆಗಳಿಂದ ಏನು ಸ್ಪಷ್ಟವಾಗುತ್ತದೆಯೆಂದರೆ ಸರ್ಕಾರದ ಕ್ರಮಗಳು - ಕರಡು ಅಧಿಸೂಚನೆ ಹೊರಡಿಸುವುದು, ಅದಕ್ಕೆ ಆಕ್ಷೇಪಣೆಗಳನ್ನು ಸ್ವೀಕರಿಸುವುದು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ನಡೆಯುವ ವಿಚಾರಣೆಗಳು ಇತ್ಯಾದಿ - ಎಲ್ಲವನ್ನೂ ಉಳಿಸಲಾಗಿದೆ ಮತ್ತು ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲು ಯಾವುದೇ ಅಡ್ಡಿಯಿಲ್ಲ, ಇದು ಕೇವಲ 2022 ರಲ್ಲಿ ಪ್ರಾರಂಭವಾದ ಪ್ರಕ್ರಿಯೆಯ ಪರಾಕಾಷ್ಠೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಎರಡು ವರ್ಷಗಳ ನಂತರ ಅಂತಿಮ ಅಧಿಸೂಚನೆ ಬರಲಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡು ಈ ಎರಡು ವರ್ಷಗಳ ಕಾಲ ವೇರಿಯಬಲ್ ಡಿಯರ್ನೆಸ್ ಭತ್ಯೆಯನ್ನು ಸೇರಿಸುವ ಅಗತ್ಯವನ್ನು ಪರಿಗಣಿಸಲಾಗಿದೆ.

ಆದ್ದರಿಂದ, ದಿನಾಂಕ: 11-04-2025 ರಂದು ಹೊರಡಿಸಲಾದ ಏಕ ರೂಪದ ಕರಡು ಅಧಿಸೂಚನೆ (Single Notification) ಗೆ ಉದ್ಯೋಗದಾತರು, ಕೈಗಾರಿಕಾ ಮುಖ್ಯಸ್ಥರು ಮತ್ತು ಕಾರ್ಮಿಕ ಸಂಘಗಳಿಂದ ಸ್ವೀಕೃತವಾದ ಸಲಹೆಗಳು ಹಾಗೂ ಆಕ್ಷೇಪಣೆಗಳನ್ನು ಮತ್ತು ಕನಿಷ್ಠ ವೇತನ ಸಲಹಾ ಮಂಡಳಿಯಲ್ಲಿ ಮಂಡಳಿಯಲ್ಲಿ ದಿನಾಂಕ: 29.07.2025 ಮತ್ತು 28.08.2025 ರಂದು ಚರ್ಚಿಸಿ ಸ್ವೀಕೃತವಾದ ಅಭಿಪ್ರಾಯಗಳನ್ನು ಸರ್ಕಾರವು ಪರಿಶೀಲಿಸಿ, ಕನಿಷ್ಠ ವೇತನ ಕಾಯ್ದೆ, 1948ರ (ಕೇಂದ್ರ ಕಾಯ್ದೆ: XI) ರ ಕಲಂ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕನಿಷ್ಠ ವೇತನ ದರಗಳನ್ನು ತಕ್ಷಣದಿಂದಲೇ ಅನ್ವಯವಾಗುವಂತೆ ಪರಿಷ್ಕರಿಸಲಾಗಿದೆ.

ಅನುಸೂಚಿ- 1

ಕ್ರ. ಸಂ	ಅನುಸೂಚಿತ ಉದ್ದಿಮೆಗಳ ಹೆಸರು
1	ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ.
2	ಅಡಿಕೆ (ಸುಪಾರಿ) ಉದ್ದಿಮೆಗಳಲ್ಲಿ ಉದ್ಯೋಗ
3	ಸ್ವಯಂಯಾನ ಯಂತ್ರ ಶಾಸ್ತ್ರ, (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ)
4	ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ.
5	ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ
6	ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ

7	ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ.
8	ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ.
9	ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ.
10	ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ.
11	ಏಲಕ್ಕಿ ಮಲ್ಯೆಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ
12	ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ.
13	ಕ್ಲಬ್‌ಗಳಲ್ಲಿ ಉದ್ಯೋಗ
14	ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ.
15	ಹತ್ತಿ ಹೆಕ್ಕುವ, ಅಮಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ.
16	ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ.
17	ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ.
18	ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ.
19	ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ.
20	ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ.
21	ಇಂಜಿನಿಯರಿಂಗ್, ಫ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ.
22	ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ.
23	ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ.
24	ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ
25	ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ.
26	ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ.
27	ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ.
28	ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೋಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ.
29	ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ.
30	ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ
31	ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ.
32	ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ.
33	ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ)
34	ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ.
35	ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್- [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ.
36	ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್-ಫೆರಸ್]
37	ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ.
38	ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ.
39	ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ.

40	ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ.
41	ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ.
42	ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ.
43	ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ.
44	ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ.
45	ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ.
46	ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟಾ, ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ.
47	ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ.
48	ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ.
49	ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ.
50	ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ).
51	ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ.
52	ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೇನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ-ಇನ್‌ಫೋರ್ಸ್ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ.
53	ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ
54	ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ
55	ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ
56	ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ
57	ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ
58	ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ.
59	ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ
60	ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-1
61	ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-2

ಯಾವುದೇ ಅನುಸೂಚಿತ ಉದ್ದಿಮೆಯಲ್ಲಿ ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ ಕೆಲಸಗಳಲ್ಲಿ ಹಾಗೂ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರಿಗೆ **ಅನುಸೂಚಿ-2** ರಲ್ಲಿ ನಮೂದಿಸಿರುವ ಕನಿಷ್ಠ ವೇತನ ದರಗಳು ಅನ್ವಯವಾಗುತ್ತದೆ.

ಅನುಸೂಚಿ-2

ಕ್ರ.ಸಂ	ಅನುಸೂಚಿತ ಉದ್ದಿಮೆಗಳ ಹೆಸರು
1	ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ.
2	ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಉದ್ಯೋಗ
3	ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಪ್) ಗಳಲ್ಲಿ ಉದ್ಯೋಗ.
4	ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ

ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ.

ಹುದ್ದೆಯ ಸ್ವರೂಪ	ವಲಯ-1		ವಲಯ-2		ವಲಯ-3	
	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ

ಯಂತ್ರಗಳ ಸಹಾಯದಿಂದ ಮಾತ್ರ ಶುಚಿತ್ವಗೊಳಿಸುವುದನ್ನು ಒಳಗೊಂಡಂತೆ ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಹಾಗೂ ಅದೇ ರೀತಿಯ ಕೆಲಸಗಳಲ್ಲಿ ನಿರತರಾಗಿರುವ ಎಲ್ಲಾ ಖಾಸಗಿ ಸಫಾಯಿ ಕರ್ಮಚಾರಿಗಳು.	989.00	25714.07	899.09	23376.43	817.36	21251.30

ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಉದ್ಯೋಗ

ಉಷ್ಣ ವಿದ್ಯುತ್ ಸ್ಥಾವರ (ಥರ್ಮಲ್ ಪವರ್ ಸ್ಟೇಷನ್) ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು

ಹುದ್ದೆಯ ಸ್ವರೂಪ	ದಿನಕ್ಕೆ	ತಿಂಗಳಿಗೆ
ಅತಿ ಕುಶಲ ಕಾರ್ಮಿಕರು 1. ಸೀನಿಯರ್ ಇಂಜಿನಿಯರ್ 2. ಇಂಜಿನಿಯರ್ 3. ಗ್ಯಾಂಗ್ ಲೀಡರ್ 4. ಅಸಿಸ್ಟೆಂಟ್ ಮ್ಯಾನೇಜರ್ 5. ಡೆಪ್ಯುಟಿ ಮ್ಯಾನೇಜರ್ 6. ಮ್ಯಾನೇಜರ್ ಮತ್ತು ಇತರೆ ಅತಿಕುಶಲ ಸ್ವರೂಪದ ಹುದ್ದೆಗಳು	1,316.36	34,225.42
ಕುಶಲ ಕಾರ್ಮಿಕರು 1. ಜೂನಿಯರ್ ಇಂಜಿನಿಯರ್ 2. ಸೀನಿಯರ್ ಟೆಕ್ನಿಷಿಯನ್ 3. ಎಲೆಕ್ಟ್ರಿಷಿಯನ್ 4. ಮೇಸ್ತ್ರಿ 5. ಕಾರ್ಯಾಚರಣೆ & ನಿರ್ವಹಣಾ ಅಧಿಕಾರಿ 6. ಸೀನಿಯರ್ ಅಸೋಸಿಯೇಟ್ 7. ಡ್ರೈವರ್ 8. ಫಿಟ್ಟರ್ / ಮೆಕ್ಯಾನಿಕ್ 9. ವೆಲ್ಡರ್ ಮತ್ತು ಇತರೆ ಕುಶಲ ಸ್ವರೂಪದ ಹುದ್ದೆಗಳು	1,196.69	31,114.02
ಅರೆ ಕುಶಲ ಕಾರ್ಮಿಕರು 1. ಇಂಜಿನಿಯರಿಂಗ್ ಆಪರೇಟರ್ 2. ಟೆಕ್ನಿಷಿಯನ್, 3. ಅಸಿಸ್ಟೆಂಟ್ ಕುಕ್ 4. ಎಲೆಕ್ಟ್ರಿಷಿಯನ್ 5. ಜೂನಿಯರ್ ಇಂಜಿನಿಯರ್ 6. ಲೈನ್‌ಮನ್ ಮತ್ತು ಇತರೆ ಅರೆಕುಶಲ ಸ್ವರೂಪದ ಹುದ್ದೆಗಳು	1,087.90	28,285.47
ಅಕುಶಲ ಕಾರ್ಮಿಕರು 1. ಅಟೆಂಡರ್ 2. ಕಾವಲುಗಾರ 3. ಹೆಲ್ಪರ್ 4. ಹೌಸ್ ಕೀಪರ್ 5. ಸೆಕ್ಯುರಿಟಿ 6. ಆಫೀಸ್ ಬಾಯ್ ಮತ್ತು ಇತರೆ ಅಕುಶಲ ಸ್ವರೂಪದ ಹುದ್ದೆಗಳು	989.00	25,714.07

ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಉದ್ಯೋಗ ಜಲ, ಸೌರ ಮತ್ತು ಪವನ ವಿದ್ಯುತ್ ಸ್ಥಾವರಗಳಲ್ಲಿ ಕೆಲಸ ಮಾಡುವ ಕಾರ್ಮಿಕರು		
ಅತಿ ಕುಶಲ ಕಾರ್ಮಿಕರು 1. ಸೀನಿಯರ್ ಇಂಜಿನಿಯರ್ 2. ಇಂಜಿನಿಯರ್ 3. ಗ್ಯಾಂಗ್ ಲೀಡರ್ 4. ಅಸಿಸ್ಟೆಂಟ್ ಮ್ಯಾನೇಜರ್ 5. ಡೆಪ್ಯುಟಿ ಮ್ಯಾನೇಜರ್ 6. ಮ್ಯಾನೇಜರ್ ಮತ್ತು ಇತರೆ ಅತಿಕುಶಲ ಸ್ವರೂಪದ ಹುದ್ದೆಗಳು	1,196.69	31,114.02
ಕುಶಲ ಕಾರ್ಮಿಕರು 1. ಜೂನಿಯರ್ ಇಂಜಿನಿಯರ್ 2. ಸೀನಿಯರ್ ಟೆಕ್ನಿಷಿಯನ್ 3. ಎಲೆಕ್ಟ್ರಿಷಿಯನ್ 4. ಮೇಸ್ತ್ರಿ, 5. ಕಾರ್ಯಾಚರಣೆ & ನಿರ್ವಹಣಾ ಅಧಿಕಾರಿ 6. ಸೀನಿಯರ್ ಅಸೋಸಿಯೇಟ್ 7. ಡ್ರೈವರ್ 8. ಫಿಟ್ಟರ್ / ಮೆಕ್ಯಾನಿಕ್ 9. ವೆಲ್ಡರ್ ಮತ್ತು ಇತರೆ ಕುಶಲ ಸ್ವರೂಪದ ಹುದ್ದೆಗಳು	1,087.90	28,285.47
ಅರೆ ಕುಶಲ ಕಾರ್ಮಿಕರು 1. ಇಂಜಿನಿಯರಿಂಗ್ ಆಪರೇಟರ್ 2. ಟೆಕ್ನಿಷಿಯನ್, 3. ಅಸಿಸ್ಟೆಂಟ್ ಕುಕ್ 4. ಎಲೆಕ್ಟ್ರಿಷಿಯನ್ 5. ಜೂನಿಯರ್ ಇಂಜಿನಿಯರ್ 6. ಲೈನ್‌ಮನ್ ಮತ್ತು ಇತರೆ ಅರೆಕುಶಲ ಸ್ವರೂಪದ ಹುದ್ದೆಗಳು	989.00	25,714.07
ಅಕುಶಲ ಕಾರ್ಮಿಕರು 1. ಅಟೆಂಡರ್ 2. ಕಾವಲುಗಾರ 3. ಹೆಲ್ಪರ್ 4. ಹೌಸ್ ಕೀಪರ್ 5. ಸೆಕ್ಯುರಿಟಿ 6. ಆಫೀಸ್ ಬಾಯ್ ಮತ್ತು ಇತರೆ ಅಕುಶಲ ಸ್ವರೂಪದ ಹುದ್ದೆಗಳು	899.09	23,376.43

ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಪ್) ಗಳಲ್ಲಿ ಉದ್ಯೋಗ ಹಾಗೂ ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ.

ಕೌಶಲ್ಯವಾರು ವಿವರ	ವಲಯ-1		ವಲಯ-2		ವಲಯ-3	
	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ
ಅತಿಕುಶಲ	**1316.36**	**34225.42**	**1196.69**	**31114.02**	**1087.90**	**28285.47**
ಕುಶಲ	**1196.69**	**31,114.02**	**1087.90**	**28285.47**	**989.00**	**25,714.07**
ಅರೆ ಕುಶಲ	**1087.90**	**28285.47**	**989.00**	**25,714.07**	**899.09**	**23376.43**
ಅಕುಶಲ	**989.00**	**25,714.07**	**899.09**	**23376.43**	**817.36**	**21251.30**

ಅನುಸೂಚಿ- 3

ಹೊಸದಾಗಿ ಅನುಸೂಚಿಗೆ ಸೇರ್ಪಡೆಗೊಳಿಸಲಾಗಿರುವ ಅನುಸೂಚಿತ ಉದ್ದಿಮೆಗಳು

ಕ್ರ. ಸಂ	ಅನುಸೂಚಿತ ಉದ್ದಿಮೆಗಳ ಹೆಸರು
1.	ಖಾಸಗಿ ಶಾಲಾ ಕಾಲೇಜು ಮತ್ತು ವಿವಿಧ ತರಬೇತಿ ಕೇಂದ್ರಗಳಲ್ಲಿ ಕೆಲಸ ಮಾಡುವ ಬೋಧಕೇತರ ಸಿಬ್ಬಂದಿಗಳಾಗಿ ಉದ್ಯೋಗ.
2	ವಿದ್ಯುನ್ಮಾನ ವ್ಯವಹಾರ (E- Commerce) ಮತ್ತು ಕೊರಿಯರ್ (Courier) ಸೇವಾ ಸಂಸ್ಥೆಗಳಲ್ಲಿ ಉದ್ಯೋಗ.
3	ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳು- ಮಂದಿರಗಳು, ಮಠಗಳು, ಚರ್ಚುಗಳು, ಮಸೀದಿಗಳು, ಗುರುದ್ವಾರಗಳು, ಬಸದಿಗಳು, ಗುಡಿಗಳು, ವಿಹಾರಗಳು ಹಾಗೂ ಇಸ್ಕಾನ್, ಆರ್ಯ ಸಮಾಜ, ಥಿಯೋಸೊಫಿಕಲ್ ಸೊಸೈಟಿ ಇತ್ಯಾದಿಗಳ ಸಹಿತ ಈ ಮೇಲ್ಕಂಡ ಎಲ್ಲಾ ಸಂಸ್ಥೆಗಳ ಕಛೇರಿಗಳಲ್ಲಿ ಉದ್ಯೋಗ.
4	ಸಾರ್ವಜನಿಕ ವಿನೋದ ಕ್ರೀಡಾ ಸ್ಥಳ (Public Amusement Parks), ಜಲ ಆಧಾರಿತ ವಿನೋದ ಕ್ರೀಡಾ ಸ್ಥಳಗಳು (Water Theme Parks) ಹಾಗೂ ಇತರೆ ವಾಣಿಜ್ಯ ಮನೋರಂಜನಾ/ವಿಹಾರ ಸ್ಥಳಗಳಲ್ಲಿ ಉದ್ಯೋಗ.
5	ಮೊಬೈಲ್ ಗೋಪುರಗಳ ನಿರ್ವಹಣೆ, ಟಿ.ವಿ. ಕೇಬಲ್ ಜಾಲ ಹಾಗೂ ತತ್ಸಮಾನ ಪ್ರಕ್ರಿಯೆಗಳಲ್ಲಿ ಉದ್ಯೋಗ.
6	ಒಳನಾಡು ಜಲ ಸಾರಿಗೆ ಅಂದರೆ ವಾಣಿಜ್ಯ ಮೋಟಾರು ದೋಣಿಗಳು, ಲಾಂಚ್‌ಗಳು, ಸಾಂಪ್ರದಾಯಿಕ ದೋಣಿಗಳು ಹಾಗೂ ಮೀನುಗಾರಿಕಾ ದೋಣಿಗಳಲ್ಲಿ ಉದ್ಯೋಗ.
7	ಅಲ್ಯೂಮಿನಿಯಂ ಮತ್ತು ಟಿನ್ ಉತ್ಪನ್ನಗಳಲ್ಲಿ ಉದ್ಯೋಗ
8	ಬೆತ್ತ ಮತ್ತು ಬಿದಿರು ಉದ್ದಿಮೆಗಳಲ್ಲಿ ಉದ್ಯೋಗ.
9	ತೆಂಗಿನಕಾಯಿ ಮತ್ತು ನಾರು ಉತ್ಪನ್ನಗಳ ಉದ್ದಿಮೆಗಳಲ್ಲಿ ಉದ್ಯೋಗ.
10	ಗಣಕಯಂತ್ರ (ಕಂಪ್ಯೂಟರ್) ಮತ್ತು ಸೈಬರ್/ಅಂತರ್ಜಾಲ ಕೇಂದ್ರಗಳಲ್ಲಿ ಉದ್ಯೋಗ
11	ಕರಕುಶಲ ಸಂಸ್ಥೆಗಳಲ್ಲಿ ಉದ್ಯೋಗ.
12	ಎಲ್.ಪಿ.ಜಿ. ಸಂಗ್ರಹ ಮತ್ತು ವಿತರಣಾ ಉದ್ದಿಮೆಯಲ್ಲಿ ಉದ್ಯೋಗ.
13	ಕೊಳವೆ ಬಾವಿ ಕೊರೆಯುವ ಮತ್ತು ನಿರ್ವಹಣೆ ಮಾಡುವ ಪ್ರಕ್ರಿಯೆಗಳಲ್ಲಿ ಉದ್ಯೋಗ.
14	ಅಡಿಗೆ ಉಪ್ಪು ತಯಾರಿಕಾ ಪ್ರಕ್ರಿಯೆ / ಉದ್ದಿಮೆಗಳಲ್ಲಿ ಉದ್ಯೋಗ.
15	ಎಂ-ಸ್ಯಾಂಡ್ ಸಂಸ್ಥೆಗಳಲ್ಲಿ ಉದ್ಯೋಗ
16	ಕೋಳಿ / ಹಕ್ಕಿಗಳ ಸಾಕಾಣಿಕೆ ಮತ್ತು ಪಶು ಪಾಲನಾ ಪ್ರಕ್ರಿಯೆಗಳಲ್ಲಿ ಉದ್ಯೋಗ.
17	ಗೊಂಬೆ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ
18	ರೆಡಿಮಿಕ್ಸ್ ಕಾಂಕ್ರೀಟ್ ಕಾರ್ಖಾನೆಗಳಲ್ಲಿ ಉದ್ಯೋಗ

ಮುಂದಿನ ದಿನಗಳಲ್ಲಿ ಅನುಸೂಚಿ-3 ರಲ್ಲಿ ನಮೂದಿಸಿರುವ ಅನುಸೂಚಿತ ಉದ್ದಿಮೆಗಳಿಗೆ ಸಂಹಿತೆಯ ಕಲಂ 8 (1) ಎ ಅಥವಾ 8 (1) ಬಿ ರಡಿ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸುವ ಅಧಿಕಾರವು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ.

ವಿಶೇಷ ಸೂಚನೆ: ತುಂಡು ಆಧಾರದ (ಪೀಸ್ ವರ್ಕ್) ಕೆಲಸದ ಸ್ವರೂಪಗಳಿರುವ ಹಾಗೂ ಶ್ರಮಿಕ ಪ್ರಧಾನ್ಯತೆಯುಳ್ಳ ಈ ಕೆಳಕಂಡ ಅನುಸೂಚಿತ ಉದ್ದಿಮೆಗಳಿಗೆ ವೇತನ ಸಂಹಿತೆ, 2019ರ 8 (1) ಎ ರ ಪ್ರಾವಧಾನಗಳನುಸಾರ ಸಮಿತಿ ವಿಧಾನದ ಮುಖಾಂತರ ಕನಿಷ್ಠ ವೇತನ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತದೆ.

ಕ್ರ.ಸಂ	ಅನುಸೂಚಿತ ಉದ್ದಿಮೆಗಳ ಹೆಸರು
1.	ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ
2.	ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ.
3.	ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ
4.	ಸರಕು ಸಾಮಗ್ರಿಗಳನ್ನು ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್ ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ
5.	ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ.
6.	ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ
7.	ಅರಣ್ಯ ಮತ್ತು ಕಟ್ಟಿಗೆ ಡಿಪೋ (ಘಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ

8.	ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಫ್ರೀ- ಸ್ಪೇಸ್ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ.
9.	ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ.
10.	ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ
11.	ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ
12.	ಸಿಂಕೋನಾ, ರಬ್ಬರ್, ಟೀ ಮತ್ತು ಕಾಫೀ ತೋಟಗಳಲ್ಲಿ ಉದ್ಯೋಗ (ಮೇಸ್ತ್ರಿ, /ಸೂಪರ್ ವೈಸರ್).
13.	ಸಿಂಕೋನಾ, ರಬ್ಬರ್, ಟೀ ಮತ್ತು ಕಾಫೀ ತೋಟಗಳಲ್ಲಿ ಉದ್ಯೋಗ (ನಾನ್ ಸ್ಕಾಫ್).
14.	ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ.
15.	ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ
16.	ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ
17.	ಖಾದಿ ಮತ್ತು ಗ್ರಾಮೀಣ ಉದ್ದಿಮೆಗಳಲ್ಲಿ ಉದ್ಯೋಗ.
18.	ಶಾಮಿಯಾನ, ಚಪ್ಪರ ಮತ್ತು ಪೆಂಡಾಲ್‌ಗಳನ್ನು ನಿರ್ಮಿಸಿ, ತೆಗೆಯುವ ಪ್ರಕ್ರಿಯೆ ಹಾಗೂ ಹೂವಿನ ಅಲಂಕಾರ, ಪೀಠೋಪಕರಣಗಳ ಜೋಡಣೆ ಇತ್ಯಾದಿ ಕೆಲಸಗಳಲ್ಲಿ ಉದ್ಯೋಗ.
19.	ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಉದ್ಯೋಗ

ಈ ಅಧಿಸೂಚನೆಯಲ್ಲಿ, **ಅನುಸೂಚಿ-1** ಈಗಾಗಲೇ ಕಾಯ್ದೆಯ ಅನುಸೂಚಿಗೆ ಸೇರ್ಪಡೆಗೊಂಡು ಕನಿಷ್ಠ ವೇತನ ಪರಿಷ್ಕರಿಸಲಾಗುತ್ತಿರುವ ಉದ್ದಿಮೆಗಳನ್ನು ಒಳಗೊಳ್ಳುತ್ತದೆ. **ಅನುಸೂಚಿ-3** ಕಾಯ್ದೆಯ ಅನುಸೂಚಿಗೆ ಹೊಸದಾಗಿ ಸೇರ್ಪಡೆಗೊಂಡ ಪ್ರಥಮ ಬಾರಿಗೆ ವೇತನ ನಿಗದಿಪಡಿಸಬಹುದಾದ ಉದ್ದಿಮೆಗಳನ್ನು ಒಳಗೊಳ್ಳುತ್ತದೆ. **ಅನುಸೂಚಿ-1** ಹಾಗೂ **ಅನುಸೂಚಿ-3** ರಲ್ಲಿರುವ ಉದ್ದಿಮೆಗಳಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ **ಅನುಸೂಚಿ-4** ರಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ. **ಅನುಸೂಚಿ-4**ರಲ್ಲಿ ನಿಗದಿಪಡಿಸಿರುವ / ಪರಿಷ್ಕರಿಸಲಾಗಿರುವ ಕನಿಷ್ಠ ವೇತನ ದರಗಳು **ಅನುಸೂಚಿ-5** ರಲ್ಲಿ ನಮೂದಿಸಿರುವ ಎಲ್ಲಾ ಕೆಲಸದ ವರ್ಗೀಕರಣಗಳಿಗೆ ಅನ್ವಯವಾಗುತ್ತವೆ. ಅನುಸೂಚಿಗಳಿಗೆ ಹೊಸ ಉದ್ದಿಮೆಗಳನ್ನು ಹಾಗೂ ಕೌಶಲ್ಯದ ಆಧಾರದಲ್ಲಿ ಹೊಸ ಹುದ್ದೆಗಳನ್ನು ಸೇರ್ಪಡೆಗೊಳಿಸುವ ಅಧಿಕಾರ ಸರ್ಕಾರದ್ದಾಗಿರುತ್ತದೆ.

ಅನುಸೂಚಿ-1, ಅನುಸೂಚಿ-2 ಹಾಗೂ ಅನುಸೂಚಿ-3 ರಲ್ಲಿ ನಮೂದಿಸಿರುವ ಅನುಸೂಚಿತ ಉದ್ದಿಮೆಗಳಿಗೆ ಈ ಕೆಳಕಂಡ ಷರತ್ತುಗಳು ಅನ್ವಯವಾಗುತ್ತದೆ ಹಾಗೂ ಅವುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾದ್ಯಸ್ಥರಿರುತ್ತಾರೆ;

1. **ವ್ಯತ್ಯಾಸವಾಗುವ ತುಟ್ಟಿಭತ್ಯೆ:-**

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 9469 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ

ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

ಆ) ದಿನಗೂಲಿ ವೇತನ ಪಡೆಯುವವರು :-

ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು
26

2. ಮಹಿಳೆಯರು, ಪುರುಷರು, ತೃತೀಯ ಲಿಂಗಿಗಳು ಮತ್ತು ವಿಕಲಚೇತನರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು.
3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
5. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
6. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
7. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
9. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆ ನೇರವಾಗಿ ಜಮೆ ಮಾಡತಕ್ಕದ್ದು.

ಅನುಸೂಚಿ-4

ಕೌಶಲ್ಯವಾರು ವಿವರ	ವಲಯ-1		ವಲಯ-2		ವಲಯ-3	
	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ	ದಿನಕ್ಕೆ	ತಿಂಗಳಿಗೆ
ಅತಿಕುಶಲ	**1196.69**	**31114.02**	**1087.90**	**28285.47**	**989.00**	**25714.07**
ಕುಶಲ	**1087.90**	**28285.47**	**989.00**	**25714.07**	**899.09**	**23376.43**
ಅರೆ ಕುಶಲ	**989.00**	**25714.07**	**899.09**	**23376.43**	**817.35**	**21251.30**
ಅಕುಶಲ	**899.09**	**23376.43**	**817.35**	**21251.30**	**743.05**	**19319.36**

ಈ ಅಧಿಸೂಚನೆಯ ವಲಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ;

ವಲಯ-1: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿ ಬರುವ ಪ್ರದೇಶಗಳು.

ವಲಯ-2: ರಾಜ್ಯದ ಇತರೆ ಮಹಾನಗರ ಪಾಲಿಕೆಗಳು ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳು.

ವಲಯ-3: ವಲಯ-1 ಮತ್ತು 2 ರಲ್ಲಿ ನಮೂದಿಸಿದ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಪ್ರದೇಶಗಳು.

v. **<u>ಈ ಅಧಿಸೂಚನೆಯಲ್ಲಿ ನಮೂದಿಸಿದ ಉದ್ಯೋಗಿಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಪ್ರವರ್ಗದ ವ್ಯಾಖ್ಯಾನವು ಕೆಳಗಿನಂತಿರುತ್ತದೆ:</u>**

i) ಅಕುಶಲ ಕಾರ್ಮಿಕರು (Un-skilled Workers)

ಅಕುಶಲ ಕಾರ್ಮಿಕರೆಂದರೆ ದೈಹಿಕ ಶ್ರಮದ ಆಧಾರದ ಮೇಲೆ ಕೆಲಸ ನಿರ್ವಹಿಸುವ ಕಾರ್ಮಿಕರಾಗಿದ್ದು, ವೈಯಕ್ತಿಕ ನಿರ್ಣಯ ಹಾಗೂ ಪೂರ್ವ ಅನುಭವದ ಅವಶ್ಯಕತೆಯಿಲ್ಲದ ಸರಳ ಕರ್ತವ್ಯವನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ಉದ್ಯೋಗ / ವೃತ್ತಿಯ ಪರಿಸರದ ಪರಿಚಯ ಮತ್ತು ದೈಹಿಕ ಶ್ರಮ ಇಲ್ಲಿ ಮುಖ್ಯ ಅಂಶವಾಗಿರುತ್ತದೆ.

ii) ಅರೆ ಕುಶಲ ಕಾರ್ಮಿಕರು (Semi Skilled Workers)

ಅರೆ ಕುಶಲ ಕಾರ್ಮಿಕರೆಂದರೆ ವೈಯಕ್ತಿಕ ನಿರ್ಣಯಕ್ಕೆ ಹೆಚ್ಚು ಅವಕಾಶವಿಲ್ಲದ ನಿರ್ದಿಷ್ಟ ನಿಯತ ಕ್ರಮದ ಪುನರಾವರ್ತನೆಯ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾನೆ. ಕಾರ್ಮಿಕರ ಕೆಲಸವು ನಿರ್ದಿಷ್ಟ ಮಿತಿಯನ್ನು ಹೊಂದಿದ್ದು, ಇನ್ನೊಬ್ಬ ವ್ಯಕ್ತಿಯ ತೀರ್ಮಾನಕ್ಕೆ ಅನುಗುಣವಾಗಿ ನಿರ್ವಹಿಸುವ ಕೆಲಸವಾಗಿರುತ್ತದೆ. ಯಂತ್ರಗಳ ಸಹಾಯದಿಂದ ನಿರ್ವಹಿಸುವ ಸರಳ ಕೆಲಸಗಳನ್ನು ಮಾಡುವವರಾಗಿರುತ್ತಾರೆ.

iii) ಕುಶಲ ಕಾರ್ಮಿಕರು (Skilled Workers)

ಕುಶಲ ಕಾರ್ಮಿಕರು ತಮ್ಮ ಸ್ವಂತ ನಿರ್ಣಯ, ತೀರ್ಮಾನ ಮತ್ತು ವಿವೇಚನೆಗೆ ಒಳಪಟ್ಟು ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ತಮ್ಮ ವೃತ್ತಿ ಮತ್ತು ಉದ್ಯೋಗದ ಬಗ್ಗೆ ಆಳವಾದ ಮತ್ತು ಅಮೂಲಾಗ್ರ ಜ್ಞಾನವನ್ನು ಹೊಂದಿದ ಕಾರ್ಮಿಕರಾಗಿರುತ್ತಾರೆ. ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿದ್ಯಾರ್ಹತೆ ಪರಿಣತಿ ಮತ್ತು ಅನುಭವ ಹೊಂದಿರುತ್ತಾರೆ.

Iv) ಅತಿ ಕುಶಲ ಕಾರ್ಮಿಕರು (Highly Skilled Workers)

ಅತಿ ಕುಶಲ ಕಾರ್ಮಿಕರೆಂದರೆ ಕರ್ತವ್ಯವನ್ನು ನಿರ್ವಹಿಸಲು ದಕ್ಷತೆ ಮತ್ತು ಅತೀವ ಸಾಮರ್ಥ್ಯ ಇರುವ ಕಾರ್ಮಿಕರಾಗಿದ್ದು, ಕುಶಲ ಕಾರ್ಮಿಕರ ಸಹಿತ ಎಲ್ಲಾ ಕಾರ್ಮಿಕರ ಕರ್ತವ್ಯಗಳ ಮೇಲ್ವಿಚಾರಣೆ ನಡೆಸಿ ಪರಿಣಾಮಕಾರಿಯಾಗಿ ಫಲಿತಾಂಶವನ್ನು ಸಾಧಿಸಲು ಶಕ್ತರಾಗಿರುವ ಕಾರ್ಮಿಕರಾಗಿರುತ್ತಾರೆ ಹಾಗೂ ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿಶೇಷ ಜ್ಞಾನ ಮತ್ತು ಪರಿಣತಿಯನ್ನು ಹೊಂದಿರುತ್ತಾರೆ.

<u>ಅನುಸೂಚಿ -5</u>

<u>ಅನುಸೂಚಿತ ಉದ್ದಿಮೆಗಳ ಕೆಲಸದ ವರ್ಗೀಕರಣ</u>

ಅತಿ ಕುಶಲ	ಕುಶಲ	ಅರೆ ಕುಶಲ	ಅಕುಶಲ
1. ಮ್ಯಾನೇಜರ್	1. ಸಿವಿಲ್ ಸೂಪರ್ ವೈಸರ್	1. ಸಹಾಯಕ ಫಿಟ್ಟರ್	1. ಗಾರ್ಡನರ್ಸ್ / ಮಾಲಿಗಳು
2. ಫೋರ್ ಮನ್	2. ಅಸೆಂಬ್ಲಿಂಗ್ ಸೂಪರ್ವೈಸರ್	2. ಸಹಾಯಕ ಎಲೆಕ್ಟ್ರೀಷಿಯನ್	2. ಟಪಾಲ್‌ಮನ್
3. ಸಹಾಯಕ ಫೋರ್ ಮನ್	3. ಎಲೆಕ್ಟ್ರಿಷಿಯನ್ ಸೂಪರ್ ವೈಸರ್	3. ಸಹಾಯಕ ಬ್ಲಾಕ್ ಸ್ಮಿತ್	3. ಹಮಾಲರು
4. ಬೇಕರ್ ಬೆಂಚ್‌ಮನ್	4. ಟೆಕ್ನಿಕಲ್ ಸೂಪರ್‌ವೈಸರ್	4. ಸಹಾಯಕ ವೆಲ್ಡರ್	4. ಮಾರ್ಕ್ಟರ್
5. ಗೇಜ್‌ಮನ್	5. ಸೂಪರ್‌ವೈಸರ್	5. ಸಹಾಯಕ ಕಾರ್ಪೆಂಟರ್	5. ಪಿಕ್ಕ್ ರ್
6. ಒಳಾಂಗಣ ವಿನ್ಯಾಸದ ನಮೂನೆ ತಯಾರಕರು	6. ವರ್ಕ್‌ಶಾಪ್ ಸೂಪರ್ವೈಸರ್	6. ಸಹಾಯಕ ಟರ್ನರ್	6. ಜವಾನ
7. ಒಳಾಂಗಣ ಅಲಂಕಾರ ಹಾಗೂ ಪೀಠೋಪಕರಣಗಳ ಹೊದಿಕೆ (Upholstery)	7. ಸೂಪರ್‌ವೈಸರ್ (ಶಿಫ್ಟ್/ ವರ್ಕ್ಸ್ / ಟೆಕ್ನಿಕಲ್)	7. ಸಹಾಯಕ ಗ್ರೀಸರ್	7. ಲಿಫ್ಟ್ ಆಪರೇಟರ್
8. ವರ್ಕ್ಶಾಫ್ ಮೆಕ್ಯಾನಿಕ್	8. ಯಾಂತ್ರಿಕ ಮೇಲ್ವಿಚಾರಕ (ಮೆಕ್ಯಾನಿಕಲ್ ಸೂಪರ್‌ವೈಸರ್)	8. ಸಹಾಯಕ ಆಯಿಲ್ ಮೆನ್	8. ಆಫೀಸ್ ಬಾಯ್
9. ನಿರ್ವಾಹಕರು (ಆಪರೇಟರ್ಸ್)	9. ಕ್ಲಿನಿಕಲ್ ಸೂಪರ್ವೈಸರ್	9. ಸಹಾಯಕ ಪೇಯಿಂಟರ್	9. ಆಯಾ
10. ಚರಕಿಗಳು ಮತ್ತು ಅಚ್ಚುಗಾರರು (ಟರ್ನರ್ಸ್)	10. ಪ್ರೊಸೆಸಿಂಗ್ ಸೂಪರ್ ವೈಸರ್	10. ಸಹಾಯಕ ಮೆಷಿನಿಸ್ಟ್	10. ಅಟೆಂಡರ್
11. ದಿಮ್ಮಿಯ ತೊಗಟೆ ತೆಗೆಯುವ ಕಾರ್ಮಿಕರು	11. ತೋಟಗಾರಿಕಾ ಸೂಪರ್ವೈಸರ್	11. ಸಹಾಯಕ ವೈರ್‌ಮನ್	11. ಮಜ್ದೂರ್
12. ಕುದಿಯಂತ್ರ ಉರಿಸುವವರು (Boiler Operators)	12. ಪ್ರೊಡಕ್ಷನ್ ಸೂಪರ್ ವೈಸರ್	12. ಸಹಾಯಕ ಮೆಕ್ಯಾನಿಕ್	12. ಸೇವಕರು
13. ಹಿರಿಯ ಆಪರೇಟರ್ಸ್	13. ಮೆಸ್ ಸೂಪರ್ವೈಸರ್	13. ಲರ್ನರ್ಸ ಅಥವಾ ಅಪ್ರೆಂಟೀಸ್	13. ಕಾವಲುಗಾರ
	14. ಹೋಮ್ ಡೆಲಿವರಿ ಸೂಪರ್‌ವೈಸರ್	14. ಸಹಾಯಕ ಟಿಂಕರ್	14. ಮೆಸ್ ಬಾಯ್
	15. ಸೆಕ್ಯೂರಿಟಿ ಸೂಪರ್ವೈಸರ್	15. ಟೈರ್ ಫಿಟ್ಟರ್	15. ಸಾಮಾನು ಹೊರುವವ
	16. ಟ್ರಾಫಿಕ್ ಸೂಪರ್ವೈಸರ್	16. ಸಹಾಯಕ ಹಿಟ್ಟು ಕಲೆಸುವವರು	16. ದಲಾಯತ್
	17. ಮೆಂಟೆನೆನ್ಸ್ ಸೂಪರ್ವೈಸರ್	17. ಬಿಸ್ಕತ್ತು ತಯಾರಿಸುವವರು	17. ಮೆಸ್ಸೆಂಜರ್
	18. ಸಹಾಯಕ ಸೂಪರ್ ವೈಸರ್		18. ವೇಯಿಂಗ್‌ಮೆನ್
	19. ಲೈವ್ ಸ್ಟಾಕ್ ಸೂಪರ್‌ವೈಸರ್		19. ಧೋಬಿ ಅಥವಾ ಅಗಸ
	20. ಸಿವಿಲ್ ಸೂಪರ್ ವೈಸರ್		20. ಶುಚಿ ಮಾಡುವವರು
			21. ಕಾವಲುಗಾರ

14. ವರ್ಕ್ಸ್ ಮ್ಯಾನೇಜರ್
15. ಪ್ರೊಡಕ್ಷನ್ ಮ್ಯಾನೇಜರ್
16. ಅನಲಿಸ್ಟ್
17. ಸೀನಿಯರ್ ಕೆಮಿಸ್ಟ್
18. ಪ್ಲಾಂಟ್ ಇನ್‌ಚಾರ್ಜ್
19. ಸ್ವೀವರ್ಡ್, ಹೆಡ್‌ಕುಕ್ / ಸ್ವಿಮ್ಮಿಂಗ್ ಕೋಚ್
20. ಅಕ್ಷರಸ್ಥ ಕೂಲಿ
21. ಪ್ರೊಡಕ್ಷನ್ ಮ್ಯಾನೇಜರ್
22. ಸೇಲ್ಸ್ ಎಕ್ಸಿಕ್ಯೂಟಿವ್
23. ಕ್ವಾಲಿಟಿ ಇನ್‌ಸ್‌ಪೆಕ್ಟರ್
24. ಪ್ಲಾಂಟ್ ಇನ್‌ಚಾರ್ಜ್ ಫಾರ್ಮ್‌ನ್
25. ಸೀನಿಯರ್ ಮೆಕ್ಯಾನಿಕ್
26. ಸೀನಿಯರ್ ಫಿಟ್ಟರ್
27. ಸೀನಿಯರ್ ವೆಲ್ಡರ್
28. ಸೀನಿಯರ್ ಟರ್ನರ್
29. ಕಂಪ್ಯೂಟರ್ ಪ್ರೊಗ್ರಾಮರ್
30. ಸೀನಿಯರ್ ಆಪರೇಟರ್ಸ್
31. ಚಾರ್ಜ್‌ಹ್ಯಾಂಡ್: ಲೀಡಿಂಗ್ ಹ್ಯಾಂಡ್ ಸೀನಿಯರ್
32. ಸೀನಿಯರ್ ಗ್ಲಾಸ್ ಟೆಕ್ನಾಲಜಿಸ್ಟ್
33. ಗ್ಲಾಸ್ ಬ್ಲೋಯರ್
34. ಜೂನಿಯರ್ ಟೆಕ್ನೀಷಿಯನ್
35. ಪ್ರೊಡಕ್ಷನ್ ಮ್ಯಾನೇಜರ್
36. ಪ್ರೊಡಕ್ಷನ್ ಇಂಜಿನಿಯರ್ಸ್
37. ಗ್ಯಾಂಗ್ ಸಾ ಆಪರೇಟರ್
38. ಟೈಲ್ ಪಾಲಿಷರ್
39. ಮಾನ್ಯುಮೆಂಟ್ ಮೇಕರ್
40. ಮೊಬೈಲ್ ಕ್ರೇನ್ ಆಪರೇಟರ್
41. ಮೆಷಿನ್ ಆಪರೇಟರ್
42. ಪಾಲಿಷರ್ ಎಡ್ಜ್ ಕಟ್ಟರ್
43. ವೆಲ್ಡರ್ ಗ್ರೇಡ್ – 1
44. ಬ್ಲಾಕ್ ಕಟ್ಟರ್ (ಮೆಷಿನ್)
45. ಸ್ಲ್ಯಾಬ್ ಪ್ರೊಸೆಸಿಂಗ್ ಮ್ಯಾನ್
46. ಬ್ರಿಸ್ಕ್ ಪಾಲಿಷರ್
47. ಪಾಲಿಷಿಂಗ್ ಮೆಷಿನ್ ಆಪರೇಟರ್
48. ಸೀನಿಯರ್ ಆಪರೇಟರ್
49. ಅಡಿಗೆ ಮುಖ್ಯಸ್ಥರು
50. ಸಿಹಿ ತಿಂಡಿ ಮಾಡುವವರು

21. ಎಲೆಕ್ಟ್ರಿಕಲ್ ಸೂಪರ್ ವೈಸರ್
22. ಮೇಸ್ತ್ರಿ,
23. ಸೆಟ್ ಮೇಸ್ತ್ರಿ,
24. ದರ್ಜಿ ಮೇಸ್ತ್ರಿ,
25. ಟರ್ನರ್
26. ಫಿಟ್ಟರ್
27. ಮೆಕ್ಯಾನಿಕ್
28. ವೆಲ್ಡರ್
29. ಡೈ ಪಾಲಿಷರ್
30. ಮೆಲ್ಟರ್
31. ಮೌಲ್ಡರ್
32. ಮೇಸನ್
33. ಟ್ರೈನ್ಡ್ ಟರ್ನರ್
34. ಫಿನಿಷರ್
35. ಮಾಡೆಲ್ಲರ್
36. ಪಾಟ್ಟರ್
37. ಟ್ರೇಡರ್
38. ಟಿನ್ ಮೇಕರ್
39. ವೈರ್ಮನ್
40. ಎಲೆಕ್ಟ್ರಿಷಿಯನ್
41. ಅಪರೇಟರ್
42. ಟ್ರೈಂ ಕೀಪರ್
43. ಕಾರ್ಪೆಂಟರ್
44. ಪೇಯಿಂಟರ್
45. ಕಮ್ಮಾರ
46. ಬ್ಲಾಕ್ ಸ್ಮಿತ್
47. ಟಿನ್ ಸ್ಮಿತ್
48. ಗೋಲ್ಡ್ ಸ್ಮಿತ್
49. ಬೇರರ್
50. ಪ್ರಿಂಟರ್
51. ಡೈ ಫಿಟ್ಟರ್
52. ಡಿಸೈನರ್
53. ಕ್ಯಾಬಿನೆಟ್ ಫಿಟ್ಟರ್
54. ಬಫ್ಫರ್
55. ಮೆಷಿನ್ ಮೆನ್
56. ವೈಂಡರ್
57. ಪ್ಲೇಟರ್
58. ಡೈ ಮೇಕರ್
59. ಡ್ರಾಫ್ಟ್ ಮನ್
60. ಮಿಲ್ಲರ್
61. ಮಿಕ್ಸರ್
62. ಪ್ರೆಸ್ಸರ್
63. ಸ್ವಿಚ್ಚರ್ಸ್
64. ಬಾರ್ ಬೆಂಡರ್
65. ಬೆಂಡರ್
66. ಟಿಂಕರ್
67. ಶೇಪರ್
68. ಟಂಗ್ಸ್ ಮನ್
69. ಬರ್ನರ್
70. ಟೈಲರ್
71. ಪ್ಲಂಬರ್
72. ಮೇಸನ್
73. ಟ್ರೆಷರರಸ್
74. ಎಡಿಟರ್
75. ಡೆವಲಪರ್
76. ಏಕ್ಸ್ ಮ್ಯಾನ್
77. ಪಾಲಿಷರ್
78. ಸೋಲ್ಡರರ್
79. ಟಿನ್ ಮೇಕರ್

18. ಟಿಂಕರ್ ಸಹಾಯಕ
ಪ್ರೆಸ್‌ಮನ್
19. ಕೋಲ್ಡ್ ರೋಲಿಂಗ್ ಮೆಷಿನ್ ಆಪರೇಟರ್ ಬ್ಯಾಕ್
20. ಕೋಲ್ಡ್ ರೋಲಿಂಗ್ ಪ್ರೆಶರ್‌ಮನ್
21. ರೋಲಿಂಗ್, ಕಟ್ಟಿಂಗ್ ಮಾಡುವವರು
22. ಸರ್ಕಲ್ ಕಟ್ಟರ್
23. ಶೇರಿಂಗ್ ಮೆಷಿನ್ ಆಪರೇಟರ್
24. ಹ್ಯಾಂಡ್ ಕಟ್ಟರ್
25. ಬಿಡ್ಡಿಂಗ್ ಮೆಷಿನ್ ಆಪರೇಟರ್
26. ಅಸೀಯಿಲಿಂಗ್
27. ಫರ್ನೇಸ್ ಮನ್
28. ಅಸೆಂಬ್ಲಿಂಗ್
29. ರಿವಿಟಿಂಗ್
30. ಫಿಟ್ಟಿಂಗ್ ಮತ್ತು ಇತರೆ ಕೈ ಕೆಲಸಗಳು
31. ಕಲಾಯಿವಾಲ
32. ಹ್ಯಾಂಡ್ ಸಾಯರ್
33. ಮರ ಹಸನು ಮಾಡುವ ಯಂತ್ರ ಚಾಲಕರು
34. ಕ್ರಾಸ್ ಕಟರ್
35. ಪ್ಯಾಕರ್ (ಮರದ ಪೆಟ್ಟಿಗೆಯನ್ನು ಪ್ಯಾಕ್ ಮಾಡುವವರು)
36. ಪ್ಯಾಕಿಂಗ್ ಪೆಟ್ಟಿಗೆಯನ್ನು ತಯಾರಿಸುವವರು
37. ಸಾ ಆಪರೇಟರ್ ಹೆಲ್ಪರ್
38. ಲಾಗ್ ಹೆಲ್ಪರ್
39. ವಯಸ್ಕರು
40. ಸಹಾಯಕ ಬಡಗಿಗಳು,
41. ಪ್ಯಾಕರ್‌ಗಳು,
42. ಸಹಾಯಕ ಹೊಳಪುಗಾರರು
43. ಮರದ ಚೌಕಟ್ಟುಗಳನ್ನು ಕಟ್ಟುವವರು
44. ಯಂತ್ರದ ಮೇಜು ನಿರ್ವಾಹಕನಿಗೆ ಸಹಾಯಕರು
45. ಕೈಯಿಂದ ಕೊಯ್ದು ದಿಮ್ಮಿ ತುಂಡು ಮಾಡುವವರು (Hand Sawyer & Logger)
46. ತಳ್ಳುಬಂಡಿ ನಿರ್ವಾಹಕರು
47. ಸುಲಿಯುವ ಯಂತ್ರದ ಮೇಜಿನಿಂದ

22. ಸಪ್ಲೈಯರ್ / ಸರಬರಾಜು ಮಾಡುವವರು
23. ಜರ್ನಲ್ ಮಜ್ದೂರ್
24. ಹೊಲಿಯುವವ
25. ಬಾಟಲ್ ತೊಳೆಯುವವರು
26. ಬಾಟಲ್ ಹಂಚುವವರು
27. ಅಡಿಕೆ ಪುಡಿ ಮಾಡುವವರು
28. ಅಡಿಕೆ ಚೀಟಿ ಮಾಡುವವರು
29. ಪ್ಯಾಕೆಟ್‌ಗಳಿಗೆ ಅಡಿಕೆಯನ್ನು ತುಂಬುವವರು / ಪ್ಯಾಕರ್ಸ್
30. ಅಡಿಕೆ ಆರಿಸುವವರು/ ಹೆಕ್ಕುವವರು
31. ಅಡಿಕೆ ಪೊಟ್ಟಣಗಳನ್ನು ಎಣಿಸುವುದು
32. ಅಡಿಕೆ ಹೊರುವುದು
33. ಅಡಿಕೆ ವಿಂಗಡಿಸುವುದು / ಸಾರ್ಟರ್ಸ್
34. ಕಟ್ಟಿಂಗ್ / ಮಿಕ್ಸಿಂಗ್ ಮಾಡುವವರು
35. ಜನರಲ್ ವರ್ಕರ್ಸ್ ಲೀಫ್ ಸ್ವೀಕರ್ (ರೋಲ್ ಒಂದಕ್ಕೆ ಪಾತ್ರೆಗಳಿಗೆ ಹಿಡಿ ಹಾಕುವವ
36. ಅಭ್ಯಾಸಿ (ಅಪ್ರೆಂಟಿಸ್) ಗಳು
37. ಕೈ ದುಡಿಮೆಗಾರರು (Manual Worker)
38. ಕಾರ್ಟ್‌ಮನ್ / ಸಾ ಡಸ್ಟ್ ರಿಮೂವರ್
39. ಟಿಂಬರ್ ಕರಿಯರ್
40. ಜನರಲ್ ಹೆಲ್ಪರ್
41. ಬಂಡ್ಲಿಂಗ್, ಪ್ಯಾಕಿಂಗ್
42. ಹೆಡ್ ಲೋಡ್ ಕಾರ್ಮಿಕರು
43. ಬೆಂಡ್ ಸಾ, ರಿಸಾ ಮತ್ತು ಸರ್ಕಲ್ ಸಾ ಹೆಲ್ಪರ್
44. ದಿಮ್ಮಿ ಎತ್ತುವವರು ದಿಮ್ಮಿ ಕೂಡಿಸುವವರು ತ್ಯಾಜ್ಯ ವಸ್ತು ಸಾಗಿಸುವವರು
45. ಕ್ಯಾರಿಯರ್ / ಖಾಲಸಿ
46. ಬಾಟಲ್‌ಗಳಲ್ಲಿ ತುಂಬುವವರು
47. ಹತ್ತಿಯ ಊಬನ್ನು ಎತ್ತುವವರು ಮತ್ತು ಶುಚಿ ಮಾಡುವವರು
48. ತೂಕ ಮಾಡುವವರು
49. ಹತ್ತಿ ಹೆಕ್ಕುವವ
50. ಬಿಲ್ಲೋವರ್
51. ಮುಖ್ಯ ಮಜ್ದೂರ್
52. ಬ್ಲೂ ಪ್ರಿಂಟರ್
53. ಕರ್ಲಿಂಗ್

51. ಅಡಿಗೆಮನೆ ಮೇಲ್ವಿಚಾರಕರು
52. ಕೆಮಿಸ್ಟ್ (ಪದವೀಧರರು)
53. ಕ್ವಾಲಿಟಿ ಕಂಟ್ರೋಲ್ ಕೆಮಿಸ್ಟ್
54. ಪ್ರೊಡಕ್ಷನ್ ಇನ್‌ಚಾರ್ಜ್
55. ಎಲೆಕ್ಟ್ರಿಕಲ್ ಇಂಜಿನಿಯರ್
56. ಟ್ರೈನಿಂಗ್ ಆಫೀಸರ್
57. ಫೀಲ್ಡ್ ರೆಪ್ರೆಸೆಂಟೆಟೀವ್ಸ್
58. ಸಲಹೆಗಾರರು
59. ಟೆಕ್ನಿಕಲ್ ಆಫೀಸರ್
60. ವೆಟರ್ನರಿ ಆಫೀಸರ್
61. ಶಿಫ್ಟ್ ಇನ್‌ಚಾರ್ಜ್ ಇಂಜಿನಿಯರ್
62. ಟೈರ್ ಇನ್ಸ್‌ಪೆಕ್ಟರ್
63. ಏರಿಯಾ ಸೇಲ್ಸ್ ಮ್ಯಾನೇಜರ್ / ಆಫೀಸರ್
64. ಸೇಲ್ಸ್ ಮಾರ್ಕೆಟಿಂಗ್ ಆಫೀಸರ್
65. ಸೆಕ್ಯೂರಿಟಿ ಆಫೀಸರ್
66. ಫೀಲ್ಡ್ ಆಫೀಸರ್
67. ಫಾರ್ಮಸಿಸ್ಟ್
68. ಡಿಸೈನರ್
